ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**
**PAPER CLIPPINGS**

2

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 22/1/2021

## ವಿಧಾನ ಪರಿಷತ್ ಘಟನೆಯಿಂದ ನೋವು । ಎರಡು ಕಡೆ ಉಲ್ಲೇಖ

# ಡೆತ್ ನೋಟ್‌ನಲ್ಲಿಲ್ಲ ಸ್ಪಷ್ಟ ಕಾರಣ


■ **ಆರಗ ರವಿ** ಚಿಕ್ಕಮಗಳೂರು ವಿ.ಕ 22/1/21
ravi.puttappa@timesgroup.com


ಉಪ ಸಭಾಪತಿಯಾಗಿದ್ದ ಎಸ್.ಎಲ್. ಧರ್ಮೇಗೌಡ ಆತ್ಮಹತ್ಯೆಗೆ ಶರಣಾಗಿ 25 ದಿನ ಕಳೆದರೂ ಸಾವಿಗೆ ಕಾರಣ ಇನ್ನೂ ತಿಳಿದು ಬಂದಿಲ್ಲ. ವಿಕಗೆ ಡೆತ್ ನೋಟ್ ಮಾಹಿತಿ ಲಭ್ಯವಾಗಿದ್ದು ಅದರಲ್ಲೂ ನಿಖರ ಕಾರಣ ಗೊತ್ತಾಗಿಲ್ಲ. ತುಂಬ ಜೀವನಪ್ರೀತಿ ಹೊಂದಿದ್ದ ಅವರು ಸಚಿವ ಸ್ಥಾನ ಸಿಗದಿದ್ದರೂ ಉಪ ಸಭಾಪತಿಯಂತಹ ಉನ್ನತ ಹುದ್ದೆಗೇರಿದ್ದರು. ಚಿಕ್ಕಮಗಳೂರು ನಗರದಲ್ಲಿ ಇತ್ತೀಚೆಗಷ್ಟೇ ಮನೆಗೆ ಅಡಿಗಲ್ಲು ಹಾಕಿದ್ದರು. ಆತ್ಮಹತ್ಯೆ ಮಾಡಿಕೊಳ್ಳುವ ನಾಲ್ಕೈದು ದಿನಗಳ ಹಿಂದಷ್ಟೇ ದುಬಾರಿ ಬೆಲೆಯ ಶೂ ಮತ್ತು ಸೂಟ್ ಖರೀದಿಸಿದ್ದರು.

ಡೆತ್ ನೋಟ್ ಅನ್ನು ಒಂದೇ ಬಾರಿ ಬರೆದಿಲ್ಲ. ಕೆಲ ಸಂಗತಿಗಳನ್ನು ಮೊದಲೇ ಬರೆದಿಟ್ಟಿದ್ದು ಅಪೂರ್ಣಗೊಂಡಿದ್ದ ಡೆತ್ ನೋಟ್‌ನ್ನು ಆತ್ಮಹತ್ಯೆ ಮಾಡಿಕೊಳ್ಳುವ ದಿನ ಅಂತಿಮಗೊಳಿಸಿರುವ ಸಾಧ್ಯತೆ ಇದೆ.



ಧರ್ಮೇಗೌಡ ಆತ್ಮಹತ್ಯೆ ಪ್ರಕರಣ

ಎರಡನೇ ಪುಟದಲ್ಲಿ ಅಕ್ಷರಗಳು ಅಷ್ಟೊಂದು ಸ್ಫುಟವಾಗಿಲ್ಲ. ಇದಲ್ಲದೆ ಮೊದಲ ಮತ್ತು ಎರಡನೇ ಪುಟದಲ್ಲಿ ಬಳಸಿರುವ ಪೆನ್‌ಗಳು ಬದಲಾಗಿವೆ. ಶಾಯಿಯಿಂದ ಇದು ಗೊತ್ತಾಗುತ್ತದೆ.

**ಡೆತ್‌ನೋಟ್‌ನಲ್ಲಿ ಏನಿದೆ?:** ಡೆತ್‌ನೋಟ್‌ನ ಮೊದಲ ಪುಟ ಒಂದು ರೀತಿಯಲ್ಲಿ ಉಯಿಲು ಪತ್ರದಂತಿದೆ. ಪತ್ನಿ ಮಮತ, ಮಗ ಸೋನಾಲ್, ಸೋದರ ಭೋಜೇಗೌಡ, ಅಳಿಯ ಮನೋಜ್ ಹಾಗೂ ಮಗಳಿಗೆ ತನ್ನನ್ನು ಕ್ಷಮಿಸುವಂತೆ ಕೇಳಿಕೊಂಡಿದ್ದಾರೆ. ಎಲ್ಲರನ್ನೂ ಚೆನ್ನಾಗಿ ನೋಡಿಕೊಳ್ಳುವಂತೆ ಸೋದರ ಎಸ್.ಎಲ್.ಭೋಜೇಗೌಡ ಅವರಿಗೆ ಹೇಳಿದ್ದಾರೆ. ಯಾವುದಕ್ಕೂ ಹೆದರಬೇಡ. ಧೈರ್ಯವಾಗಿರು ಎಂದು ಮಗ ಸೋನಾಲ್‌ಗೆ ಆತ್ಮಸ್ಥೈರ್ಯದ ನುಡಿಗಳನ್ನಾಡಿದ್ದಾರೆ. ಬೀರೂರಿನ ಮನೆಯನ್ನು ಮಾರಾಟ ಮಾಡಿ ಪತ್ನಿಗೆ ಹಣ ನೀಡುವಂತೆ ತಿಳಿಸಿದ್ದು, ಇನ್ನುಳಿದ ಆಸ್ತಿಗಳ ಹಂಚಿಕೆ ಬಗ್ಗೆಯೂ ಸ್ಪಷ್ಟವಾಗಿ ನಮೂದಿಸಿದ್ದಾರೆ. ಬ್ಯಾಂಕ್ ಖಾತೆಗಳ ಬಗ್ಗೆ, ಇಬ್ಬರು ವ್ಯಕ್ತಿಗಳ ಜತೆ ಹಣಕಾಸು ವ್ಯವಹಾರ ಇರುವ ಬಗ್ಗೆಯೂ ಪತ್ರದಲ್ಲಿ ದಾಖಲಿಸಿದ್ದಾರೆ. ತಾವು ಲಿಂಗಾಯತರ ವಿರೋಧಿಯಲ್ಲ ಎಂದು ಬರೆದಿರುವುದು ಅಚ್ಚರಿಗೆ ಕಾರಣವಾಗಿದೆ. ಪತ್ರದ ಮೊದಲ ಪುಟದಲ್ಲಿ ಕುಟುಂಬದವರಿಗೆ ಧೈರ್ಯ ಹೇಳಿದ ನಂತರ, ವಿಧಾನ ಪರಿಷತ್‌ನಲ್ಲಿ ನಡೆದ ಘಟನೆಯಿಂದ ನನ್ನ ಮನಸ್ಸಿಗೆ ತೀವ್ರ ನೋವಾಗಿದೆ ಎಂದು ಬರೆದಿದ್ದಾರೆ. ಎರಡನೇ ಪುಟದಲ್ಲೂ ಒಂದು ಕಡೆ ಇದನ್ನೇ ಪುನರಾವರ್ತನೆ ಮಾಡಿದ್ದಾರೆ. ಇದನ್ನು ಹೊರತುಪಡಿಸಿದರೆ ಇಡೀ ಡೆತ್‌ನೋಟ್‌ನಲ್ಲಿ ಅದೇ ಘಟನೆಯಿಂದ ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದಾಗಲಿ, ಇತರೆ ಯಾವುದೇ ಕಾರಣವನ್ನಾಗಲಿ ಎಲ್ಲಿಯೂ ಬರೆದಿಲ್ಲ.